# ನವಿಲುಗನ್ನಡಿ

- ಮುದವೀಯುವ ಮುಖಪುಟದೊಂದಿಗೆ ಮನಸೂರೆಗೊಂಡ ಮೇ ಸಂಚಿಕೆ ಅರ್ಥಪೂರ್ಣ ಬರಹಗಳು, ಸಂದರ್ಶನ, ,ಕವಿತೆಗಳು, ಪ್ರಬಂಧಗಳು, ಅಂಕಣಗಳಿಂದ ತಿಂಗಳಿಡೀ ಸಾಹಿತ್ಯದ ರಸದೌತಣ ಬಡಿಸಿತು.

**ಸುಮನಾ, ಬೆಂಗಳೂರು**

- ಮೇ ಸಂಚಿಕೆಯ ಮುಖಪುಟ ಮೆಚ್ಚುಗೆಯಾಯಿತು. ಪ್ರಕೃತಿಯ ಮಡಿಲಲ್ಲಿ ಕೂತು ಮಾತುಕತೆ ನಡೆಸಿರುವ ಹೆಂಗಳೆಯರ ಮಂದಸ್ಮಿತ ಚಿತ್ರ ವಿಶೇಷ–ವಿಶಿಷ್ಟ.

**ಸೇತುರಾವ್ ಕುಲಕರ್ಣಿ, ಬೆಂಗಳೂರು**

- 'ಚೆನ್ನಣ್ಣ ವಾಲೀಕಾರ: ಅಧೋಲೋಕದ ಕವಿಯ ನೆನಪು' ಬರಹ ಮನ ಮುಟ್ಟಿತು. ಚೆನ್ನಣ್ಣ ವಾಲೀಕಾರರ ಬದುಕಿನ ಕೊನೆಯ ದಿನಗಳು ಹೀಗಿದ್ದವು ಎಂದು ಗೊತ್ತಿರಲಿಲ್ಲ. ಒಟ್ಟಾರೆ ಹೆಮ್ಮೆ ಹಾಗೂ ಸಂಕಟದ ಭಾವನೆಗಳು ಒಟ್ಟಿಗೇ ಮುತ್ತಿಗೆ ಹಾಕಿದಂತೆನಿಸಿತು. ಗೊದ್ಲೆಯ ಕನಸು ಮತ್ತು ಕೊನೆಯ ಮಾತು ಕಥೆಗಳು ಅವ್ಯಕ್ತ ವ್ಯಥೆಯಲಿ ಮುಳುಗಿಸಿದವು.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- 'ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ' ಕಲ್ಲೇಶ್ ಕುಂಬಾರರ ಕಥೆ ಕುತೂಹಲ ಹುಟ್ಟಿಸಿತು. ಕಥೆಯನ್ನು ಮಾಯೆ:ಒಂದು, ಮಾಯೆ:ಎರಡು, ಮಾಯೆ: ಮೂರು, ಮಾಯೆ:ನಾಲ್ಕು ಎಂದು ಹೆಸರಿಸಿರುವುದು ಓದುಗರ ಗಮನ ಸೆಳೆಯುವ ತಂತ್ರಗಾರಿಕೆಯನ್ನು ತೋರಿಸುತ್ತದೆ.

**ಮನುಶ್ರೀ ಆರ್, ಬೆಂಗಳೂರು**
**ಸಿ.ಕೆ.ಗಣಪ್ಪನವರ, ಮುಂಡರಗಿ**
**ಶಿವಕುಮಾರ ಕರನಂದಿ, ಗುಳೇದಗುಡ್ಡ**

- 'ಗೊದ್ಲೆಯ ಕನಸು' ಜೆ.ಆರ್.ರವಿಕುಮಾರ್ ಬರೆದ ವಿಚಿತ್ರ ಕನಸಿನ ಪಯಣ ಒಂದು ಹೊಸ ಯೋಚನಾಲಹರಿ.

**ತಲಕಾಡು ಶ್ರೀನಿಧಿ, ಬೆಂಗಳೂರು**




- 'ಕೊನೆಯ ಮಾತು' ಪ್ರೇಮ್‌ಕುಮಾರ್ ಹರಿಯಬ್ಬೆಯವರ ಕಥೆ ಮನೋಜ್ಞವಾಗಿ ಮೂಡಿಬಂದಿದೆ. ಅಭಿ, ಸಿದ್ಧಾರ್ಥ್ ಪಾತ್ರಗಳು ವಿರುದ್ಧ ದಿಕ್ಕಿನಲ್ಲಿ ಸಾಗುತ್ತವೆ. ಕಥಾ ಹಂದರ, ಭಾಷಾ ಶೈಲಿ, ಸಂಭಾಷಣೆ ಗಮನ ಸೆಳೆಯುವಂತಿವೆ.

**ಸು.ರಾ.ನರಸಿಂಹ ಪ್ರಸಾದ್, ಕುಣಿಗಲ್**

- 'ಕಾವ್ಯಸಂಕ'ದ ಕವನಗಳು ಮಾರ್ಮಿಕವಾಗಿದ್ದು ಮನಸ್ಸಿಗೆ ನಾಟಿದವು. ಉಗಾಂಡ ಎಂದ ತಕ್ಷಣ ನೆನಪಾಗುವುದು ಅಲ್ಲಿನ ಬಡತನದ ಭೀಕರತೆ. ಇಂತಹ ಹಿನ್ನೆಲೆಯಿಂದ ಬಂದ ಲೇಖಕಿ, ಪತ್ರಕರ್ತೆ ಬೆರ್ ಅನೇನಾ ಅವರ ಒಳನೋಟ ಹಾಗೂ ಮಾತುಗಳು ವಾಸ್ತವಾಂಶದಿಂದ ಕೂಡಿದ್ದವು.

**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- ಸುಬ್ಬು ಹೊಲೆಯಾರ್ ಅವರ ಕವಿತೆ 'ದುಃಖ ಆರದ ನೆಲದಲ್ಲಿ...' ಓದುಗನ ಪ್ರಜ್ಞೆಯನ್ನು ಜಾಗೃತಗೊಳಿಸುವಷ್ಟು ಶಕ್ತವಾಗಿದೆ. ಎಚ್.ಎಸ್.ವಿ ಮತ್ತು ಬಿ.ಆರ್. ಲಕ್ಷ್ಮಣರಾವ್ ಅವರ ಕವಿತೆಗಳು ಓದುಗನನ್ನು ಆವರಿಸಿಕೊಳ್ಳುತ್ತವೆ. ಸತ್ಯಮಂಗಲ ಮಹಾದೇವ ಅವರ ಕವಿತೆ once upon a time ಕವಿತೆಯನ್ನು ನೆನಪಿಸುತ್ತದೆ. ದಾದಾಪೀರ್ ಜೈಮನ್ ಮತ್ತು ನಾ ದಾಮೋದರ ಶೆಟ್ಟಿ ಅವರ ಕವಿತೆಗಳು ಚೆನ್ನಾಗಿವೆ. ಈ ಸಲದ ಕಾವ್ಯ ಸಂಕ ಅಂಕಣ ಮೊನಚು ಕಳಚಿಕೊಂಡಂತೆ ಅನಿಸಿತು.

**ಶ್ರೀಧರ್ ಪಿ, ಬೆಂಗಳೂರು**